MYSORE LEGISLATIVE ASSEMBLY

TENTH DAY

Thursday, 13th December 1962

The House met in the Assembly Hall, Vidhana Soudha, Bangalore, at One of the Clock.

MR. SPEAKER, (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

Supply of Electric Power to Sullia.

*Q.—182. Sri S. SUBBIAH NAIK (Sullia).—

Will the Government be pleased to state :—

(*a*) the date on which they have promised to supply electric power to Sullia ;

(*b*) the details regarding the total amount deposited and the place where it has been deposited and the name of the depositor for the supply of 217 Irrigation Pump Sets;

(*c*) when the tender was called for the construction of houses at Sullia for workers of electric department like linemen, supervisors, etc. ;

(*d*) the stage at which it is pending ?

A.—Sri S. NIJALINGAPPA (Chief Minister) —

(*a*) No promise has been made.

(*b*) 217 persons have paid a total amount of Rs. 14,141.50 towards deposit for arranging power supply to Irrigation Pump Sets at the Power and Light Office, Puttur. The details of amount paid by the individuals, etc., are placed on the Table of the House.

(*c*) Tenders were called for, for the construction of quarters at Sullia during February, 1962 by the Executive Engineer, P.W.D.

(*d*) The estimates are under preparation by the Engineer, P. W. D. Mangalore. On receipt of the same in the office of the Chief Engineer, Electricity, further action will be taken by him to obtain competent sanction to the estimates, after scrutiny.

ಶ್ರೀ ಎಸ್. ಸುಬ್ಬಯ್ಯನಾಯಕ್.— (*a*) ಪ್ರಶ್ನೆಗೆ ಉತ್ತರವಾಗಿ ಆಶ್ವಾಸನೆ ಕೊಡಲಿಲ್ಲವೆಂದು ಹೇಳಿದ್ದೀರಿ, 1959ನೆಯ ಮೇ ತಿಂಗಳಿನಲ್ಲಿ ಆಗಿನ ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳು ಶ್ರೀನೂರ್ ಚನ್ನಬಸಪ್ಪನವರು ಒಂದು ತಿಂಗಳಲ್ಲಿ ಹಣ ಕಟ್ಟಿದ್ದರೆ, ಒಂದು ವರ್ಷದಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸುತ್ತೇವೆಂದು ವಾಗ್ದಾನ ಮಾಡಿದ್ದರು, ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ವಾಗ್ದಾನ ಮಾಡಿದ್ದು ರಿಕಾರ್ಡುಗಳಲ್ಲಿ ಸಿಕ್ಕಲಿಲ್ಲ, ಆದರೂ ಕೆಲಸ ನಡೆಯುತ್ತಿದೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—(*b*) ಭಾಗದ ಉತ್ತರದಲ್ಲಿ ಫೆಬ್ರವರಿಯಲ್ಲಿ ಟೆಂಡರ್ ಕರೆದಿದ್ದರೆಂದಿದೆ, ಆದರೆ (*c*) ಭಾಗದಲ್ಲಿ ಇನ್ನೂ pending ಆಗಿದೆಯೆಂದು ತಿಳಿಸಲಾಗಿದೆ, ಇದರ ಅರ್ಥವೇನು ? ಅಂದಾಜು ತಯಾರಾಗದೆ ಹೇಗೆ ಟೆಂಡರ್ ಕರೆದರು ?

ಶ್ರೀ ಎಸ್. ನಿಜಲಿಂಗಪ್ಪ.—ವಿದ್ಯುಚ್ಛಕ್ತಿ ಇಲಾಖೆಯ ಕೆಲಸ, ಕಟ್ಟಡಗಳನ್ನು ಕಟ್ಟಬೇಕಾಗಿತ್ತು. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಅಂದಾಜು ಮಾಡಿ ಟೆಂಡರ್ ಕರೆದರು, ಆದರೆ ವಿದ್ಯುಚ್ಛಕ್ತಿ ಬೋರ್ಡಿನವರು, ಅದು ಆ ಇಲಾಖೆಗನುಗುಣವಾಗಿಲ್ಲವೆಂದು ಪುನಃ ಅವರ ರೀತಿ ಅಂದಾಜು ತಯಾರು ಮಾಡುತ್ತಿದ್ದಾರೆ.

Sri GANJI VEERAPPA.—Is it not the policy of Govt. to give top priority for supply of power for irrigation purpose?

Sri S. NIJALINGAPPA.—Yes.

Sri GANJI VEERAPPA.—Has it come to the notice of Govt. that even in cases power is required for irrigation purpose, power is not supplied?

Sri S. NIJALINGAPPA.-I do not know whether it arises out of this question, but generally speaking I may submit that is the desire of Govt. to give top priority for agricultural purpose. But unfortunately, we are in short supply of power and we are doing everything possible to see that power is given to the agriculturists.

ಶ್ರೀ ಎಸ್. ಸುಬ್ಬಯ್ಯನಾಯಕ್.—217 ಪಂಪು ಗಳಿಗೆ ಜನ ಹಣವನ್ನೊದಗಿಸಿದ್ದಾರೆ. ಇದಕ್ಕೆ ಆದ್ಯ ಪ್ರಾಮುಖ್ಯತೆ ಕೊಟ್ಟು ಯಾವಾಗ ಒದಗಿಸುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಇಂಥ ತಾರೀಖು ಎಂದು ಹೇಳುವುದಕ್ಕಾಗುವುದಿಲ್ಲ. 1,16,000 ರೂಪಾಯಿ ಖರ್ಚಾಗಿದೆ. ಆದಷ್ಟು ಬೇಗ ವಿದ್ಯುಚ್ಛಕ್ತಿಯ ಅನುಕೂಲ ಕೊಡಬೇಕೆಂದು ಸರ್ಕಾರದ ಇಚ್ಛೆ; ಕೆಲಸ ನಡೆಯುತ್ತಿದೆ. ಸಾಧ್ಯವಾದಷ್ಟು ಬೇಗ ಕೊಡುತ್ತೇವೆ.

Sri M. C. BASAPPA.—Has it not come to the notice of Govt. that work is not taken up for the supply of power to irrigation pumpsets for want of finance with the Board?

Sri S. NIJALINGAPPA.—I do not think it is correct.

ಶ್ರೀ ಎಸ್. ಸುಬ್ಬಯ್ಯನಾಯಕ್.—ಒಂದು ಲಕ್ಷ ಚಿಲ್ಲರೆ ಖರ್ಚಾಗಿದೆಯೆಂದು ಹೇಳಿದಿರಿ, ಯಾವ ಯಾವ ಕೆಲಸ ನಡೆಯುತ್ತಿವೆ? ಸರ್ವೆ ಮಾತ್ರ ನಡೆಯುತ್ತಿದೆಯೋ, ಬೇರೆಬೇರೆ ಕೆಲಸಗಳು ನಡೆಯುತ್ತಿವೆಯೊ?

ಶ್ರೀ ಎಸ್. ನಿಜಲಿಂಗಪ್ಪ.—ಲೈನ್ ಹಾಕುವುದು ಮುಖ್ಯ ಕೆಲಸ, ಅದು ನಡೆಯುತ್ತಿದೆ, ಬಾಕಿಯ ಕೆಲಸ ಆಷ್ಟು ಕಷ್ಟವಾಗುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಸೂಳ್ಯದಲ್ಲಿ ಕಟ್ಟಡಗಳು ಪೂರ್ತಿ ಆಗುವವರೆಗೂ ಈ 217 ಜನರಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದಿಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟು ಬೇಗ ಆಗುತ್ತದೆಂದು ಹೇಳಿದ್ದೇನೆ.

Sri GANJI VEERAPPA.—Has this state of national emergency affected even the supply of power for Irrigation purpose?

Sri S. NIJALINGAPPA.—Yes.

ಶ್ರೀ ಎಸ್. ಸುಬ್ಬಯ್ಯನಾಯಕ್.—14,141·50 ರೂಪಾಯಿಗಳನ್ನು ಡಿಪಾಜಿಟ್ ಮಾಡಿದ್ದಾರೆಂದು ತಿಳಿಸಿದ್ದೀರಿ, ಯಾವ ತಾರೀಕು ಮತ್ತು ಯಾರ ಹೆಸರಿನಲ್ಲಿ ಡಿಪಾಜಿಟ್ ಮಾಡಿದ್ದಾರೆ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಪಟ್ಟಿಯಲ್ಲಿ ಕೊಟ್ಟಿದೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಆವರ ಹೆಸರುಗಳೇನು? ಅದಕ್ಕೆ ಬಡ್ಡಿ ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಪಟ್ಟಿಯಲ್ಲಿದೆ, ದೊಡ್ಡ ಪಟ್ಟಿ. ಅದಕ್ಕೆಲ್ಲ ಬಡ್ಡಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸುಬ್ಬಯ್ಯನಾಯಕ್.—ಯಾರ ಹೆಸರಿಗೆ ಠೇವಣಿ ಮಾಡಿದ್ದಾರೆ.

Sri S. NIJALINGAPPA.—That is to the credit of the Electric Dept.

Sri G. VENKATAI GOWDA.—In reply to Sri Basappa the Chief Minister said that the non-supply of power to irrigation pumpsets is not due to shortage of funds. Has it come to the notice of Govt. that the Electricity Board has sanctioned estimates for twice the amount that is provided and that they have raised a loan of Rs. 3 crores?

Sri S. NIJALINGAPPA.—I know that they have raised Rs. 3 crores and I am glad to say that it was oversubscribed.

ಶ್ರೀ ಎಂ. ಸಿ. ಬಸಪ್ಪ.—ಸರ್ಕಾರದವರು ಇದನ್ನು ಪರಿಶೀಲನೆ ಮಾಡಿ, ಹಣ ಸಾಲುವುದಿಲ್ಲವೆಂದರೆ ವಿದ್ಯುಚ್ಛಕ್ತಿ ಬೋರ್ಡಿಗೆ ಹಣವನ್ನೊದಗಿಸುತ್ತಾರೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಊಹೆಯ ಪ್ರಶ್ನೆ.

ಶ್ರೀ ಎಂ. ಸಿ. ಬಸಪ್ಪ.—ಮೈಸೂರು ಜಿಲ್ಲೆಯ ಎಗ್ಸಿಕ್ಯೂಟಿವ್ ಇಂಜಿನಿಯರು ಹಣದ ಅಭಾವದಿಂದ ಐ. ಪಿ. ಸೆಟ್ಸ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಗಮನಕ್ಕೆ ಬಂದಿರಬಹುದು.

ಶ್ರೀ ಎಂ. ಸಿ. ಬಸಪ್ಪ.—ಈಗ ತಮ್ಮ ಗಮನಕ್ಕೆ ತಂದಿರುವುದರಿಂದ, ವಿಚಾರ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಟೆಂಡರುಗಳನ್ನು ಕರೆದಿದ್ದರೆಂದು ಹೇಳಿದ್ದೀರಿ, ಯಾವ ಯಾವ ಕಟ್ಟಡಗಳಿಗೆ?

ಶ್ರೀ ಎಸ್. ನಿಜಲಿಂಗಪ್ಪ.—ಎಷ್ಟಕ್ಕೆ ಬೇಕೋ ಅದಕ್ಕೆಲ್ಲಾ ಕರೆದಿದ್ದರು, ಯಾವ ಯಾವ ಕಟ್ಟಡಕ್ಕೆ ಎನ್ನುವ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಎಷ್ಟು ಮನೆಗಳನ್ನು ಕಟ್ಟಲು ಟೆಂಡರ್ ಕರೆದಿದ್ದರು?

ಶ್ರೀ ಎಸ್. ನಿಜಲಿಂಗಪ್ಪ.— ಆ ಸಮಾಚಾರ ನನ್ನಲ್ಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—217 ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಳಿದ್ದಾರೆ. ಇದರಲ್ಲಿ ಎಷ್ಟು (ಸೇಕಡ) Completion reports ಬಂದರೆ ತಾವು ಸರ್ವೀಸ್ ಕೊಡುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಮೊದಲು ಎಲ್ಲಕ್ಕೂ ಕೊಡಬೇಕೆಂದಿತ್ತು, ಈಗ ಸದ್ಯಕ್ಕೆ 50—60 ಆದರೂ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

Sri C. J. MUCKANNAPPA.—Whenever a pump is ready, I think service can be given. That is the resolution of the Board?

Sri S. NIJALINGAPPA.— I am not aware of it; he is giving information.

ಶ್ರೀ ಜಿ. ವಿ. ಗೌಡ.—Completion Report ಬಂದ ಒಂದು ವರ್ಷದೊಳಗೆ ಸೇಕಡ 50-60 ರಷ್ಟು ಆದ ಮೇಲೆ ಕೊಡಬೇಕೆಂದಿದೆಯೆ?

MR. SPEAKER.—That is Rule No 8 which is likely to be relaxed.

ಶ್ರೀ ಎಸ್. ಸುಬ್ಬಯ್ಯನಾಯಕ್.— ಪುತ್ತೂರಿನಿಂದ ಸೂಳ್ಯಕ್ಕೆ ಎಷ್ಟು ಮೈಲಿ ಇದೆ?

Sri S. NIJALINGAPPA.— The Hon'ble Member could have included it specifically in the question if he wanted a reply to that.

ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಚಾರ ನನ್ನನ್ನು ಕೇಳಿದರೆ ಏನು ಪ್ರಯೋಜನ? ಅವರಿಗೇನಾದರೂ ಸಮಾಚಾರಬೇಕಾಗಿದ್ದರೆ ಅದನ್ನು ಸರ್ಕಾರದಿಂದ ಪಡೆಯಬಹುದು. ಅವರಿಗೇ ಗೊತ್ತಿರುವಾಗ ಸರ್ಕಾರವನ್ನು ಕೇಳಿದರೆ ಪ್ರಯೋಜನವೇನು?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅಲ್ಲಿನ ನೌಕರರಿಗೆ ಮನೆಗಳನ್ನು ಸಹ ಕಟ್ಟಿಸಿಕೊಡುತ್ತೇವೆಂಬುದಾಗಿ ಉತ್ತರದಲ್ಲಿ ಹೇಳಿದ್ದಿರಿ. ಆದರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೋಸ್ಕರ ಯಾವ್ಯಾವ ಹಂತದಲ್ಲಿ ಪಾಠಶಾಲೆಗಳನ್ನು ತೆರೆಯಬೇಕೆಂದು ಯೋಚನೆ ಮಾಡಿದ್ದೀರಿ?

ಶ್ರೀ ಎಸ್. ನಿಜಲಿಂಗಪ್ಪ.— ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

MR. SPEAKER.— I disallow the supplementary. After I have disallowed, the member should know what the effect is.

ಶ್ರೀ ಜಿ. ವಿ. ಗೌಡ.—ಈಗಿನ ವಿದ್ಯುಚ್ಛಕ್ತಿ ಸರಬರಾಯಿ ಮಾಡುವಾಗ ಹೆಚ್ಚು ವಿದ್ಯುಚ್ಛಕ್ತಿಯನ್ನು ಡಿಫೆನ್ಸ್ ಪರ್ಪಸ್‌ಗೆ ಉಪಯೋಗಿಸಿದ ಮೇಲೆ ಉಳಿತಾಯವಾದ ವಿದ್ಯುಚ್ಛಕ್ತಿಯನ್ನು ಅಗ್ರಿಕಲ್‌ಚರಲ್ ಪರ್ಪಸ್‌ಗೆ ವಿನಿಯೋಗಿಸುವುದು ಒಳ್ಳೆಯದಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ವಿದ್ಯುಚ್ಛಕ್ತಿ, ಇಂಡಸ್ಟ್ರಿಗೇಷನ್ ಪರ್ಪಸ್‌ಗೂ ಮತ್ತು ಡಿಫೆನ್ಸ್ ಪರ್ಪಸ್‌ಗೂ ಬೇಕು. ಈ ಎರಡನ್ನೂ ನೋಡಿಕೊಂಡು ಯೋಗ್ಯವಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಸರಬರಾಯಿ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶ್ರೀಮಾನ್ ಚನ್ನಬಸಪ್ಪನವರು ಪಿ. ಡಬ್ಲ್ಯು. ಡಿ. ಮಿನಿಸ್ಟರ್ ಆಗಿದ್ದಾಗ ಇದ್ದಂಥ ರಿಕಾರ್ಡ್‌ನಲ್ಲಿ ಏನೂ ಹೇಳಿಲ್ಲವೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ಪ್ರಶ್ನೆ ಕೇಳಬೇಕಾಗಿದೆ. ಸಾಮಾನ್ಯವಾಗಿ ಮಂತ್ರಿಗಳು ಪ್ರವಾಸ ಹೋದಾಗ ಸ್ಥಳೀಯ ಜನಗಳು ರೆಪ್ರಸೆಂಟೇಷನ್ನುಗಳನ್ನು ಕೊಟ್ಟು ಬಾಯಲ್ಲಿ ಹೇಳಿ ಅವರ ಕುಂದು ಕೊರತೆಗಳನ್ನು ನಿವಾರಿಸಬೇಕೆಂದು ಕೇಳುವಾಗ ಮುಂತ್ರಿಗಳ ಪಕ್ಕದಲ್ಲಿರುವವರು ರಿಕಾರ್ಡ್ ಮಾಡಿಕೊಂಡು ಏನಾದರೂ ಭರವಸೆ ಕೊಡುವುದು ನಿಜವಲ್ಲವೇ? ಆ ರೀತಿ ಮಾಡಿದ್ದರೆ ರಿಕಾರ್ಡ್‌ನಲ್ಲಿ ಈ ಅಂಶ ಇಲ್ಲವೆಂದು ಹೇಳುವುದು ನ್ಯಾಯವೇ? ಒಂದು ವೇಳೆ ಆಗ ಆ ರೀತಿ ರಿಕಾರ್ಡ್ ಮಾಡದಿದ್ದರೆ, ಇನ್ನೂ ಮುಂದಾದರೂ ಅಂತಹ ರಿಕಾರ್ಡ್‌ಗಳನ್ನು ಇಡುವುದಕ್ಕೇನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಗೊಣಗಾರಿಕೆಯಿಂದ ಮಾತನಾಡುವುದರಿಂದ ಪ್ರಯೋಜನವಿಲ್ಲ. ಅವರು ಜವಾಬ್ದಾರಿಯಿಂದ ಪ್ರಶ್ನೆ ಕೇಳಬೇಕು. ಆ ರೀತಿ ಮಾಡಿದ್ದರೆ ಚೆನ್ನಾಗಿತ್ತು. ನಾವು ರಿಕಾರ್ಡ್‌ನಲ್ಲಿ ಬರೆದುಕೊಳ್ಳುವುದಿಲ್ಲವೆಂದು ಹೇಳಿದ್ದೂ ತಪ್ಪು. ಸರಿಯಾಗಿ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಆಶ್ವಾಸನೆಯನ್ನು ಕೊಟ್ಟಿರುವುದು ರಿಕಾರ್ಡ್‌ನಲ್ಲಿ ಇಲ್ಲವೆಂದು ಹೇಳಿದ್ದಾರೆ. ಆದರೂ ಕೆಲಸವೇನೊ ನಡೆಯುತ್ತಿದೆ ಎಂಬುದಾಗಿ ಹೇಳಿದರು. ಆದರೆ ಮಂತ್ರಿಗಳು ಪ್ರವಾಸ ಹೋದಾಗ ಪಕ್ಕಲ್ಲಿರುವವರು ಅನೇಕ ಜನ ಬಂದು

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ರೆಪ್ರಸೆಂಟೇಷನ್ ಮಾಡುವುದನ್ನೂ ಮತ್ತೆ ಆ ಬಗ್ಗೆ ಮಂತ್ರಿಗಳು ಭರವಸೆ ಕೊಡುವುದನ್ನು ಬರೆದು ಕೊಂಡು ಮುಂದೆ ರಿಕಾರ್ಡ್‌ಇಡುವುದು ಉತ್ತಮ ವಲ್ಲವೇ ?

Sri S. NIJALINGAPPA.—It is a suggestion for action.

ಶ್ರೀ ಗೋಪಾಲಸಾಲೆನ್ನ.—(ಎ) ಪ್ರಶ್ನೆಗೆ ಉತ್ತರ ವಾಗಿ "No promise has been made" ಎಂದು ಹೇಳಿದೆ. ಸುಮಾರು 14 ಸಾವಿರ ರೂಪಾಯಿ ಗಳನ್ನು ಒಂದು ಗ್ರಾನುದ ಮುಖಾಂತರ ಈ ಬಾಬಿಗೆ ಸರ್ಕಾರ ಅನೇಕ ವರ್ಷಗಳಹಿಂದೆಯೇ ವಸೂಲು ಮಾಡಿ ವಾಗ್ದಾನ ಮಾಡಿದ್ದಾರೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೆಲವು ಗ್ರಾನುಗಳಲ್ಲಿ ಈ ಬಾರಿಗೆ ವಸೂಲು ಮಾಡಿರುವುದು ನಿಜವೇ ?

ಅಧ್ಯಕ್ಷರು.—ಎಷ್ಟು ವರ್ಷಗಳ ಹಿಂದೆ ?

ಶ್ರೀ ಗೋಪಾಲಸಾಲೆನ್ನ.—ಸುಮಾರು ಮೂರು ವರ್ಷಗಳಾಗಿರಬಹುದು.

ಶ್ರೀ ಗೊಪಾಲಸಾಲೆನ್ನ.—ಸುಮಾರು 14 ಸಾವಿರ ಚಿಲ್ಲರೆ ರೂಪಾಯಿಗಳನ್ನು ಅಲ್ಲಿನ ಜನರು ಸರ್ಕಾರಕ್ಕೆ ಕಟ್ಟಿರಬೇಕಾದರೆ ಹಾಗೆಯೇ ಏನಾದರೂ ಸರ್ಕಾರದವರು ಆಶ್ವಾಸನೆಯನ್ನು ಹೇಳದೆಯೇ ಜನರು ಕಟ್ಟಲಿಲ್ಲ. ಆಂದ ಮೇಲೆ ಈಗ ಸರ್ಕಾರ ಆದನ್ನು ಬರೆದು ಕೊಂಡನಂತರವೂ ಆಶ್ವಾಸನೆಯನ್ನು ಕೊಡಲಿಲ್ಲವೆಂದು ಹೇಳುವುದು ಸರಿಯೇ, ಇದಕ್ಕೇನಾದರೂ ಬಡ್ಡಿಕೊಡುತ್ತೀರಾ, ಅಲ್ಲಿನ ಜನಗಳಿಗೆ ಎಷ್ಟು ಅನ್ಯಾಯವಾಗುತ್ತಿದೆ ಎನ್ನುವ ಪ್ರಶ್ನೆಯನ್ನು ಸರ್ಕಾರದವರು ಹೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ. — ಯಾವುದಾದರೂ ಒಂದು ಪ್ರಶ್ನೆಯನ್ನು ಕೇಳಿದರೆ ಜವಾಬು ಹೇಳುತ್ತೇನೆ.

ಶ್ರೀ ಗೋಪಾಲಸಾಲೆನ್ನ.—ಆಶ್ವಾಶನೆ ಕೊಡಲಿಲ್ಲ ವೆಂದು ಹೇಳುತ್ತೀರಿ. ಆಶ್ವಾಸನೆಯನ್ನೇ ಕೊಡಲ್ಲಿಲ್ಲಿಲ್ಲ ವೆಂದರೆ ಅಲ್ಲಿನ ಜನಗಳು ಯಾವ ಭರವಸೆಯಿಂದ ಈಗ ಹಣವನ್ನು ಕೊಟ್ಟಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಂತ್ರಿಗಳು ಆಶ್ವಾಸನೆ ಕೊಟ್ಟರೂ ಅಷ್ಟೆ ಆ ರೀತಿ ಕೊಡದಿದ್ದರೂ ಆ ಕೆಲಸವನ್ನು ಮಾಡಿಯೇ ತೀರಬೇಕು ಎಂಬುದಾಗಿ ತೀರ್ಮಾನ ಮಾಡಿದೆ. ಎಲ್ಲೆಲ್ಲಿ ಸಾಧ್ಯವೋ ಮತ್ತು ಅವಶ್ಯಕವೋ ಅಲ್ಲಲ್ಲಿ ರೈತರಿಗೆ ವಿದ್ಯುಚ್ಛಕ್ತಿ ಕೊಡಬೇಕು. ಎಲ್ಲಿ ವಿದ್ಯುಚಕ್ತಿ ಸರಬರಾಜು ಕೊಡುತ್ತೇವೆಂದು ಹೇಳಿರುತ್ತಾರೋ ಒಂದುವೇಳೆ ಅಲ್ಲಿ ವಿದ್ಯುಚ್ಛಕ್ತಿಯನ್ನು ಸಪ್ಲೈಮಾಡದೆ ಹೋದರೆ ಮಾನ್ಯ ಸದಸ್ಯರು ಕೆಲಸವೇನೋ ನಡೆಯುತ್ತದೆ ಎಂಬುದಾಗಿ ಗ್ರಹಿಸಬೇಕು. ಆ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಸಂದೇಹವೇ ಇರಬೇಕಾಗಿಲ್ಲ.

ಶ್ರೀ ಗೋಪಾಲಸಾಲೆನ್ನ.—ಈ ವಿದ್ಯುಚ್ಛಕ್ತಿಯನ್ನು ಒದಗಿಸುವಂತಹ ಯೋಜನೆ ಸದ್ಯದಲ್ಲಿ ಸರ್ಕಾರಕ್ಕೆ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲವೆಂಬುದಾಗಿ ಹೇಳಿದ್ದರೆ ಜನಗಳು ಕಟ್ಟಿರತಕ್ಕ ಹಣವನ್ನು ವಾಪಸ್ಸು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಯೋಜನೆಯನ್ನು ಅವರಿಗೆ ಕೊಟ್ಟೇತೀರಬೇಕು ಎಂಬುದಾಗಿ ಸರ್ಕಾರದಲ್ಲಿ ನಿರ್ಧಾರವಾಗಿರುವಾಗ ಜನಗಳು ಕಟ್ಟಿದ ಹಣವನ್ನು ವಾಪಸ್ಸು ಕೊಡುವುದು ಎಲ್ಲಿ ಬರುತ್ತದೆ ?

Sri. S. S. KOLKE BAIL.—May I Know from the Government, how many months or years it may take to give power to a place ?

Sri S. NIJALINGAPPA.—Possibly, it will take a few months.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ವಿದ್ಯುಚ್ಛಕ್ತಿ ಇಲಾಖೆಯ ಲೈನ್‌ಮೆನ್‌ಗಳು, ಸೂಪರ್‌ವೈಜರುಗಳಿಗೆ ಕ್ವಾರ್ಟರುಗಳನ್ನು ಕಟ್ಟುವ ವಿಷಯದಲ್ಲಿ ಸರ್ಕಾರದವರು ಹೆಚ್ಚಿಗೆ ಗಮನ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಗಮನ ಕೊಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ನೀರಾವರಿ ಉದ್ದೇಶ ಕ್ಕೋಸ್ಕರ ರೈತರು ಅರ್ಜಿಹಾಕಿ ಹಣವನ್ನು ಡಿಪಾಜಿಟ್ ಮಾಡಿದ ಮೇಲೆ ಎಷ್ಟು ದಿವಸಗಳಲ್ಲಿ ಅವರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂದು ಸರ್ಕಾರದವರು ನೀತಿಯನ್ನು ಇಟ್ಟುಕೊಂಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಹೇಳುವುದಕ್ಕಾಗುದಿಲ್ಲ. ಕೆಲವು ಸಮಯಗಳಲ್ಲಿ ನಾವೇ ಅವರು ಕೇಳುವುದಕ್ಕಿಂತ ಮುಂಚಿತವಾಗಿಯೇ ಕೊಟ್ಟಿರುತ್ತೇವೆ. ಕೆಲವು ಸಾರಿ ಆಶ್ವಾಸನಗಳನ್ನೂ ಸಹ ಮಾಡಿರುತ್ತೇವೆ. ಆದರೆ ಕಾಲ ನಿಗದಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀರಾವರಿ ಪಂಪು ಸೆಟ್‌ಗಳಿಗೇನೋ ಅಲ್ಲಿನ ಜನಗಳು ಹಣಕೊಟ್ಟಿದ್ದಾರೆ. ಈಗ ವಿದ್ಯುಚ್ಛಕ್ತಿ ಮೇಲೆ ಬೆಲೆ ಜಾಸ್ತಿ ಮಾಡಿದ್ದಾರೆ. ಆ ರೀತಿ ಬೆಲೆ ಜಾಸ್ತಿಯಾಗಿರುವುದರಿಂದ ಈ ಆ ಸೆಟ್ಟುಗಳು ಬೇಡವೆಂದೇನಾದರೂ ರೆಪ್ರಸೆಂಟೇಷನ್ಸ್ ಬಂದಿವೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

Transfer of Husband and wife working as Class III or Class IV Officials in Government Services to Separate Places in the State.

*Q.—266 Sri J. NARAYANAPPA (Mulbagal).—

Will the Government be pleased to state :—

(*a*) whether they are aware that husband and wife working as Class III or Class IV Officials in